# ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ



ಶ್ರೀ. ದತ್ತಾತ್ರೇಯ ಸೋಮೇಶ್ವರ ಹೆಗಡೆ,
ಸಾ: ಮಾವಿನಕೊಪ್ಪ
ಪೋ: ಎಕ್ಕಂಬಿ
ತಾ: ಶಿರಸಿ
ಜಿ:ಉತ್ತರ ಕನ್ನಡ
ದೂ: 08384–268752 ಮೊ: 9611589776

## ವಿಶೇಷ ಸಾಧನೆಗಳು :

- ಶ್ರೀ. ದತ್ತಾತ್ರೇಯ ಸೋಮೇಶ್ವರ ಹೆಗಡೆ , ಇವರು 18 ಎಕರೆ ಸಾಗುವಳಿ ಭೂಮಿ ಹಾಗೂ 20 ಎಕರೆ ಬೆಟ್ಟವನ್ನು ಹೊಂದಿದ್ದು ಸಂಪೂರ್ಣ ಕೃಷಿ ಕ್ಷೇತ್ರ ಸಾವಯವ ಧೃಡೀಕರಣಗೊಂಡಿದ್ದು, ಕೇರಳ ಹಾಗೂ ಗೋವಾ ವರ್ತಕರು ನೇರವಾಗಿ ಮನೆಬಾಗಿಲಿಗೆ ಬಂದು ಸಾಂಬಾರು ಪದಾರ್ಥಗಳನ್ನು ಖರೀದಿಸುತ್ತಿದ್ದಾರೆ. ಅಲ್ಲದೇ ವಿವಿಧ ಸಂಸ್ಥೆಗಳ ಮೂಲಕ ಅರಬ್ ಮತ್ತು ಯುರೋಪಿಯನ್ ಹೊರದೇಶಗಳಿಗೂ ರಫ್ತು ಮಾಡುತ್ತಿದ್ದಾರೆ.
- ಅಡಿಕೆ ಹಾಗೂ ತೆಂಗು ಆಧಾರಿತ ಬಹುಮಹಡಿ ಪದ್ಧತಿಯಲ್ಲಿ ಬಾಳೆ, ಕಾಳುಮೆಣಸು, ಕೊಕೊ, ಲವಂಗ, ಏಲಕ್ಕಿ, ಅಗರವುಡ್ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಏಕ ಬೆಳೆಯಾಗಿ ಭತ್ತ, ಕಬ್ಬು, ಶುಂಠಿ, ಅರಿಶಿಣ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ಮಳೆ ನೀರನ್ನು ಸಮರ್ಪಕವಾಗಿ ಕೊಯ್ಲು ಮಾಡುವ ನಿಟ್ಟಿನಲ್ಲಿ ಬೆಟ್ಟದ ಸುಮಾರು 18 ಎಕರೆ ಪ್ರದೇಶದಲ್ಲಿ, 3 ಬೃಹತ್ ಹಾಗೂ ಅನೇಕ ಚಿಕ್ಕ ಚಿಕ್ಕ ಪೂರಕ ಇಂಗುಗುಂಡಿಗಳನ್ನು ನಿರ್ಮಿಸಲಾಗಿದೆ ಹಾಗೂ ಅರ್ಧ ಚಂದ್ರಾಕಾರದ ಬದುಗಳನ್ನು ಮಾಡಲಾಗಿದೆ.
- ಮಣ್ಣಿನ ಸಂರಕ್ಷಣೆಗಾಗಿ ವಿವಿಧ ಜಾತಿಯ ಹುಲ್ಲು(ಲಾವಂಚ)  ಹಾಗೂ ಅರಣ್ಯ ಗಿಡಗಳನ್ನು(ಹೊಂಗೆ, ಸಿಮರುಬಾ, ಗೇರು, ಶಿವಣಿ, ದೇವದಾರು) ಜೈವಿಕ ಬದುವಾಗಿ ಬೆಳೆಸಿದ್ದಾರೆ.
- ಸಂಪೂರ್ಣ ಅಡಿಕೆ ತೋಟದಲ್ಲಿ  ಪಿವಿಸಿ ಪೈಪುಗಳನ್ನು ಬಳಸಿ ವೈಜ್ಞಾನಿಕವಾಗಿ ಅಂತರ್ಗತ ಬಸಿಗಾಲುವೆಗಳನ್ನು ನಿರ್ಮಿಸಿದ್ದು, ಬೇರು ಹುಳು ಹಾಗೂ ಅಡಿಕೆ ಕೊಳೆ ರೋಗವನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ.
- ಶ್ರೀಯುತರು ಸಾವಯವ ಕೃಷಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದ್ದು, ಜೈವಿಕ ಪೀಡೆನಾಶಕಗಳು, ಜೈವಿಕ ಗೊಬ್ಬರಗಳು ಹಾಗೂ ಸಾವಯವ ಪರಿಕರಗಳಾದ ಹಸಿರೆಲೆ ಗೊಬ್ಬರ,ಕೊಟ್ಟಿಗೆ ಗೊಬ್ಬರ, ಕುರಿ ಹಾಗೂ ಎರೆಗೊಬ್ಬರಗಳನ್ನು ಕೃಷಿಯಲ್ಲಿ ಬಳಕೆ ಮಾಡುತ್ತಿದ್ದಾರೆ.  ತಮ್ಮ ಸಾವಯವ ಕೃಷಿಯ ಯಶಸ್ಸನ್ನು ಇತರೆ ರೈತರಿಗೆ ಅನೇಕ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾಹಿತಿ ನೀಡುತ್ತಿದ್ದಾರೆ.
- ಅಲ್ಲದೇ ಕೃಷಿ ಪ್ರವಾಸೋಧ್ಯಮ ಭಾಗವಾಗಿ ಕದಂಬ ಟೂರ್ಸ ಮುಖಾಂತರ ತಮ್ಮ ಕೃಷಿ ಕ್ಷೇತ್ರದಲ್ಲಿಯೇ ಹೋಮ್ ಸ್ಟೇ ಯನ್ನು ನಿರ್ವಹಿಸುತ್ತಿದ್ದಾರೆ
- ಕೂಲಿ ಕಾರ್ಮಿಕರ ಸಮಸ್ಯೆ ನೀಗಿಸಲು ಕೃಷಿಯಲ್ಲಿ ಯಂತ್ರಗಳ ಬಳಕೆಗೆ ಹೆಚ್ಚಿನ ಒತ್ತು ನೀಡಿದ್ದು  ಅಡಿಕೆಯನ್ನು ವಿದ್ಯುತ್ ಚಾಲಿತ ಯಂತ್ರದ ಮೂಲಕ ಸುಲಿಯಲಾಗುತ್ತಿದೆ ಹಾಗೂ ಶುಂಠಿ ಮತ್ತು ಅರಿಶಿಣ ಮೌಲ್ಯವರ್ಧನೆಗೂ ಕೂಡ ವಿದ್ಯುತ್ ಚಾಲಿತ ಕೊಚ್ಚುವ ಯಂತ್ರವನ್ನು ಉಪಯೋಗಿಸಲಾಗುತ್ತಿದೆ.
- ಅಲ್ಲದೇ ಪುಷ್ಪಕೃಷಿ, ಹೈನುಗಾರಿಕೆ ಹಾಗೂ ಜೇನು ಸಾಕಾಣಿಕೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.





# ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿ ಮಹಿಳೆ



**ಶ್ರೀಮತಿ. ವೀಣಾ ಸುಬ್ರಾಯ ಹೆಗಡೆ,**
**ಸಾ: ತುಂಬೆಮನೆ**
**ಪೋ: ಊರತೋಟ – 581410**
**ತಾ: ಶಿರಸಿ**
**ಜಿ:ಉತ್ತರ ಕನ್ನಡ**

## ವಿಶೇಷ ಸಾಧನೆಗಳು :

- ಕಸದಿಂದ ರಸ ಮಾಡುವ ಪ್ರವೃತ್ತಿಯ ವ್ಯಕ್ತಿತ್ವ , ಎಲ್ಲ ತರಹದ ಬೀಜಗಳಿಂದ ಕಲಾತ್ಮಕ ಕಲ್ಪನೆಯ ಒಳನೋಟವನ್ನು ಹವ್ಯಾಸವಾಗಿ ಮಾಡಿಕೊಂಡು, ಹೈನುಗಾರಿಕೆಯನ್ನು ಪ್ರಾಥಮಿಕ ಆದಾಯದ ಮೂಲವೆಂದು ನಂಬಿದಂತಹ ಕೃಷಿ ಮಹಿಳೆ ಶ್ರೀಮತಿ ವೀಣಾ ಸುಬ್ರಾಯ ಹೆಗಡೆ.
- ಕೇವಲ 6 ರಾಸುಗಳನ್ನು ಸಾಕಿಕೊಂಡು ವಾರ್ಷಿಕವಾಗಿ 4.1 ಲಕ್ಷ ಆದಾಯವನ್ನು ಗಳಿಸಿ ಇತರರಿಗೆ ಮಾದರಿಯಾಗಿದ್ದಾರೆ.
- 36 ಗುಂಟೆ ಕೃಷಿ ಭೂಮಿಯನ್ನು ಹೊಂದಿದು, ಮಣ್ಣು ನೀರಿನ ಸಂರಕ್ಷಣೆ ಮತ್ತು ನಿರ್ವಹಣೆಯನ್ನು ಅರಿತು ಅಗತ್ಯಕ್ಕೆ ತಕ್ಕಂತೆ ಬಸಿಗಾಲುವೆ ಮತ್ತು ಬದುಗಳನ್ನು ನಿರ್ಮಿಸಿ ಅಡಿಕೆ ತೋಟದಲ್ಲಿ ಹನಿ ನೀರಾವರಿ ವ್ಯವಸ್ಥೆ, ಅಂತರ ಬೆಳೆ ಮಿಶ್ರ ಬೆಳೆ ಮತ್ತು ಏಕ ಬೆಳೆಯಾಗಿ ಭತ್ತ , ಕಬ್ಬು ಬೆಳೆಯುತ್ತಾರೆ.
- ಮಣ್ಣಿನ ಫಲವತ್ತತೆ ನಿರ್ವಹಣೆಗಾಗಿ ಕೊಟ್ಟಿಗೆ ಗೊಬ್ಬರದೊಂದಿಗೆ ಹಸಿರೆಲೆ ಗೊಬ್ಬರ, ಜೈವಿಕ ಅನಿಲ ಘಟಕದ ತ್ಯಾಜ್ಯವನ್ನು ಬಳಸಲಾಗುತ್ತಿದೆ.
- ಕೂಲಿ ಕಾರ್ಮಿಕರ ಕೊರತೆಯಿಂದ ಇವರು ಅಗತ್ಯವಿರುವ ಯಂತ್ರೋಪಕರಣಗಳನ್ನು ಸಮರ್ಪಕವಾಗಿ ಬಳಸುವುದರೊಂದಿಗೆ ಶ್ರಮ ಮತ್ತು ಸಮಯವನ್ನು ಲಲಿತ ಕಲೆಯ ಕಡೆಗೆ ವಿನಿಯೋಗಿಸಲು ಸಹಾಯಕವಾಗಿದೆ.
- ಕೃಷಿಯಿಂದ ಬಂದಂತಹ ಉತ್ಪನ್ನಗಳನ್ನು ನೇರವಾಗಿ ಬಳಕೆದಾರರಿಗೆ ಮಾರುವುದರಿಂದ ಮಧ್ಯವರ್ತಿಗಳಿಂದ ಆಗುವ ಹಾನಿಯನ್ನು ತಪ್ಪಿಸಿಕೊಂಡು ಲಾಭ ಗಳಿಸುತ್ತಿದ್ದಾರೆ.




